ಕವಿತೆ

# ಸಂಧ್ಯಾ ದೇವಿ ಕವಿತೆಗಳು

## ಸಮೀಪ



ಅಕ್ಕ ಮಹಾದೇವಿಗೊಲಿದ ದೇವ
ಚೆನ್ನ ಮಲ್ಲಿಕಾರ್ಜುನ
ಹೇಗಿರುವನೋ...
ಗೊತ್ತಿಲ್ಲ.

ನನ್ನ ಭಾಗ್ಯವು ಏನು
ಏನು ಕಡಿಮೆಯಲ್ಲ
ಅವನಿಗಿರುವನು ನನಗೊಲಿದವನು
ಅತಿ ಸಮೀಪನು.

ಮೈಲುಗಳಾಚೆಯಿದ್ದು ಮೈಯೊಳಗೆ
ಮಿಂಚಾಗುವನು ಮೈಯ
ಮರೆಸುವವನು.

ನಾನಿಲ್ಲಿ ನಲುಗಿದರೆ ಅವನೆಲ್ಲೋ
ನೋಡುವನು ಕಣ್ಣೀರನೊರೆಸಿ
ರಮಿಸುವವನು.

ಕರೆದರೆ ಬಾರದಿರನು ಬಂದರೆ
ಬೆರೆಯದಿರನು ಮುಟ್ಟದೇ
ಮುದ್ದಿಸುವವನು.

ಬೇರಾರಿಗೂ ಕಾಣನು ಕನಸಿನಂತೆ
ಅವನು ಹೆಜ್ಜೆಯಚ್ಚು ಮೂಡದಂತೆ
ಬಳಿಗೆ ಬರುವವನು.

ಓ... ಚೆನ್ನಮಲ್ಲಿಕಾರ್ಜುನನೆ
ನನಗೆ ಅವನು!

ಚಿತ್ರಗಳು: ಎಸ್.ವಿ. ಹೂಗಾರ